ಶ್ರೀ ಟಿ. ಚನ್ನಯ್ಯ.—ನರ್ಕಾರವವರು ಕೆಲವಮಾತಿ ಸಿದರೂ ಒಂದೇ ಅಪಪಾ ದುಡನ್ನು ಆ ಜಿಲ್ಲಾ ಬೋರ್ಡಿಗೆ ಕೊಟ್ಟು ಅದರ ಮೂಲಕ ಈ ಕೆಲಸ ನಡೆಯುವಂತೆ ಮಾಡಿದರೂ ಒಂದೇ. ಅದಕಾರಣ ಈಗ ಈ ರಸ್ತೆಯನ್ನು ಜಿಲ್ಲಾ ಬೋರ್ಡ್ ಮೂಲಕ ಮಾಡಿಸುವೇಕೆಂದಿವ್ದೇವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಹಾಗಿದ್ದರೆ ಈಗಲಾದರೂ ನರ್ಕಾರವವರೇ ಹಣ ಕೊಟ್ಟು ಈ ರಸ್ತೆಯನ್ನೇಕೆ ಮಾಡಿಸಬಾರದು?

Sri T. CHANNIAH.—His request will be examined very sympathetically.

ಶ್ರೀ ಸಿ. ಎಚ್. ಲಿಂಗದೇವರು.—1952ರಲ್ಲಿ ಈ ರೋಡ್ ಕ್ಲಾಸಿಫಿಕೇಷನ್ ಮಾಡಿದಾಗ ರಸ್ತೆಗಳನ್ನು ಸ್ಟೇಟ್‌ಫಂಡ್ ರಸ್ತೆ, ನ್ಯಾಷನಲ್ ಹೈವೇಸ್, ಜಿಲ್ಲಾ ಬೋರ್ಡ್ ರಸ್ತೆ ಮತ್ತು ಐ.ವಿ.ಸಿ. ರಸ್ತೆಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದ ವಿಚಾರ ತಮಗೆ ಗೊತ್ತಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಇದು ಐ.ವಿ.ಸಿ. ರಸ್ತೆಯೇ ಆಗಿದ್ದರೂ ಇತ್ತೀಚೆಗೆ ಇದನ್ನು ಜಿಲ್ಲಾ ಬೋರ್ಡಿಗೆ ವಹಿಸಲಾಗಿದೆ.

Road from Sira to Changavara ((Improvement).

Q.—361. Sri B. N. RAME GOWDA (Sira).—

Will the Government be pleased to state :—

(*a*) whether it has come to their notice that the road from Sira to Changavara is not fit for both heavy and light traffic;

(*b*) whether any improvements have been made to that road?

A.—Sri T. CHANNIAH (Minister for Public Health and Local Self-Government).—

(*a*) No. It is fit for traffic of normal weight.

(*b*) Yes.

ಶ್ರೀ ಬಿ. ಎಕ್. ರಾಮೇಗೌಡ.—ಶಿರಾದಿಂದ ಚಂಗಾವರಕ್ಕೆ ಹೋಗತಕ್ಕ ರಸ್ತೆಯು ಕಗ್ಗಲಡು, ಹೊನ್ನೇನಹಳ್ಳಿ ಗ್ರಾಮಗಳ ಮುಖೆ ಸಂಪೂರ್ಣವಾಗಿ ಹಾಳಾಗಿಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಅದರೆ ಆ ರಸ್ತೆ ಈಗ ನೀವು ಹೇಳುವಷ್ಟರ ಮಟ್ಟಿಗೆ ಕೆಟ್ಟುಹೋಗಿಲ್ಲ ವರ್ಷ ವರ್ಷವೂ ಆ ರಸ್ತೆಗೆ ರಿಪೇರಿ ಕೆಲಸಗಳು ನಡೆಯುತ್ತಲೇ ಇವೆ.

ಶ್ರೀ ಬಿ. ಎಕ್. ರಾಮೇಗೌಡ.—ಜನರು ತಿರುಗಾಡುವುದಕ್ಕೂ ಸಹ ಅಲ್ಲಿ ಅವಕಾಶವಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ನಮಗೆ ಬಂದಿರತಕ್ಕ ವರದಿಯ ಪ್ರಕಾರ ಜನರು ತಿರುಗಾಡುವುದಕ್ಕೆ ಪಾತ್ರವೇ ಅಲ್ಲ—ಲೈಟ್ ಟ್ರಾಫಿಕ್ ನಡೆಸುವುದಕ್ಕೂ ಕೂಡ ಆ ರಸ್ತೆ ಚೆನ್ನಾಗಿರುತ್ತದೆಂದು ತಿಳಿದು ಬಂದಿದೆ.

ಶ್ರೀ ಬಿ. ಎಕ್. ರಾಮೇಗೌಡ.—ನಾನೇ ಅಲ್ಲಿಗೆ ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ರಸ್ತೆ ಸಂಪೂರ್ಣವಾಗಿ ಹಾಳಾಗಿಹೋಗಿದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕಳೆದ ಐದು ವರ್ಷಗಳಲ್ಲಿ ಆ ರಸ್ತೆಗೆ 27,403 ರೂಪಾಯಿಗಳು ಖರ್ಚಾಗಿದೆ. ಅಲ್ಲದೆ ಪ್ರತಿ ವರ್ಷವೂ ಆ ರಸ್ತೆ ಸಾಲಾಬಾದು ಕಾಂಗಾರಿ ಕೂಡ ಬಿದ್ದಂತೆ ನಡೆಸಿಕೊಂಡು ಬಂದಿರುವುದಾಗಿ ನಮಗೆ ಬಂದಿರುವ ವರದಿಯಿಂದ ತಿಳಿದು ಬರುತ್ತದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ನರ್ಕಾರದವರು ಜಿಲ್ಲಾ ಬೋರ್ಡುಗಳಿಗೆ ಪಾವತಿ ಮಾಡುವ ಮೊಬಲಗನ್ನು ಪಾವತಿ ಮಾಡದೆ ಇರುವುದರಿಂದಲ್ಲವೇ ಆ ಜಿಲ್ಲಾ ಬೋರ್ಡಿನವರಿಗೆ ಈ ರಸ್ತೆಯನ್ನು ನರಿಯಾಗಿ ಮೈನ್‌ಟೈನ್ ಮಾಡಲು ಸಾಧ್ಯವಿಲ್ಲದಂತಾಗಿರುವುದು? ಆದ್ದರಿಂದ ತಾವು ಈ ರಸ್ತೆಗೇನಾದರೂ ಸ್ಪೆಷಲ್ ಗ್ರಾಂಟನ್ನು ಕೊಟ್ಟು ಅದನ್ನು ನರಿಪಡಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾ ಬೋರ್ಡಿನವರೇ ಈ ರಸ್ತೆಯನ್ನು ಇನ್ನೂ ಉತ್ತಮವಾಗಿರತಕ್ಕಂಥ ರೀತಿಯಲ್ಲಿ ದುರಸ್ತು ಮಾಡುವಹಾಗೆ ನಾವು ಅವರಿಗೆ ತಿಳಿಸುತ್ತೇವೆ. ನಾವು ಅವರಿಗೆ ಗ್ರಾಂಟ್ ಮೂಲಕ ಮತ್ತು ಸಾಲದ ರೂಪವಾಗಿ ಹಣವನ್ನು ಒದಗಿಸುತ್ತಿದ್ದೇವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ನರ್ಕಾರ ಈ ಜಿಲ್ಲಾ ಬೋರ್ಡುಗಳಿಗೆ ಯಾವ ಯಾವ ಗ್ರಾಂಟುಗಳನ್ನು ಮತ್ತು ಮೊಬಲಗುಗಳನ್ನು ಕೊಡಬೇಕಾಗಿತ್ತೋ ಅವುಗಳನ್ನು ಕೊಡದೆ ಇರುವುದರಿಂದ ತಾನೆ ಈ ಜಿಲ್ಲಾ ಬೋರ್ಡುಗಳಿಗೆ ಈ ದಿವಸ ಆ ಕಾರ್ಯಗಳನ್ನು ಕೈಗೊಳ್ಳಲು ಆಗದೆ ಇರುವುದು?

ಶ್ರೀ ಟಿ. ಚನ್ನಯ್ಯ.—ನರ್ಕಾರದವರು ಕೊಡತಕ್ಕ ದ್ದನ್ನು ನಾವು ಕ್ರಮವಾಗಿ ಕೊಡುತ್ತಿದ್ದೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈ ರಸ್ತೆಯನ್ನು ಪಟ್ಟನಾಯ್ಕನಹಳ್ಳಿ—ಚಂಗಾವರ ಮೂಲಕ ಹಿರಿಯೂರಿಗೆ ಹೋಗಿ ಸೇರುವಂತೆ ಒಂದು ರಸ್ತೆಯನ್ನು ಮಾಡಿಸಿಕೊಳ್ಳಲು ಜನರು ಕೇಳಿಕೊಂಡಿಲ್ಲವೇ?

ಅಧ್ಯಕ್ಷರು.—ಆ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ.

QUESTIONS FOR ANSWERS ON THE DAY

(But not taken up).

Vidhana Soudha.

Q.—197. Sri B. V. NARAYANA REDDY (Bagepalli-Gudibanda).—

Will the Government be pleased to state :—

(*a*) what is the amount of work of the Vidhana Soudha building so far executed;

(*b*) when is it likely to be completed;

(*c*) what are the estimates for the (i) furniture, (i) electricity, etc., for the same?